

ಗಂಡು ನವಿಲುಕೋಳಿ



# ಬೋರ್ನಿಯ ಚಾರಣವೂ ನವಿಲುಕೋಳಿ ದರ್ಶನವೂ...

ಪ್ರಪಂಚದಲ್ಲಿ ಇನ್ನೂ ಬೆಳಕಿಗೆ ಬಾರದ ಎಷ್ಟೋ ಜೀವವೈವಿಧ್ಯವಿದೆ. ನವಿಲುಕೋಳಿ ಕೂಡ ದಶಕದಿಂದೀಚೆಗೆ ಪತ್ತೆಯಾಗಿರುವ ಪಕ್ಷಿ. ಮಲೇಷ್ಯಾದ ಬೋರ್ನಿಯ ದ್ವೀಪದಲ್ಲಿ ಈ ಅಪರೂಪದ ನವಿಲುಕೋಳಿಯನ್ನು ಕಂಡ ಕ್ಷಣದ ಕಥನ ಇಲ್ಲಿದೆ...

■ ಟಿ. ಶಿವಾನಂದಪ್ಪ

ನಮ್ಮ ರಾಷ್ಟ್ರಪಕ್ಷಿ ನವಿಲು, ತನ್ನ ಸೌಂದರ್ಯದಿಂದ ಗಮನಸೆಳೆಯುವ ಹಕ್ಕಿ ಮಾತ್ರವಲ್ಲ, ಗಂಡು ನವಿಲಿನ ಬಣ್ಣ ಮತ್ತು ರೆಕ್ಕೆಪುಕ್ಕಗಳ ವಿನ್ಯಾಸವೇ ಚಿತ್ತಾಕರ್ಷಗೊಳಿಸುವಂಥದ್ದು.

ಇಂತಹದೇ ಮತ್ತೊಂದು ಪಕ್ಷಿ ‘ಬೋರ್ನಿಯದ ನವಿಲುಕೋಳಿ’ **(Bornian peacock pheasant)**. ಈ ವಿಶೇಷ ಹಕ್ಕಿ ಮಲೇಷ್ಯಾದ ಬೋರ್ನಿಯ ದ್ವೀಪದಲ್ಲಿದೆ ಎಂದು ಗೊತ್ತಾಗಿದ್ದು ಇತ್ತೀಚಿನ ದಶಕಗಳಲ್ಲಿ. ಡಾರ್ವಿನ್ನನು ಈ ಭೂ ಭಾಗವನ್ನು ಅನ್ವೇಷಿಸಿರಲಿಲ್ಲ. ಶತಮಾನಗಳ ಹಿಂದೆ (1859ಕ್ಕೂ ಮೊದಲು) ಅವನ ಸಮಕಾಲೀನ ಆಲ್‌ಫ್ರೆಡ್ ವ್ಯಾಲೇಸ್ ಈ ಪ್ರದೇಶಕ್ಕೆ ಭೇಟಿ ಕೊಟ್ಟಿದ್ದರೂ ಜನರೇ ಇಲ್ಲದ ಇಂಥ ದ್ವೀಪದಲ್ಲಿ ಅನೇಕ ಅಪರೂಪದ ಪಕ್ಷಿಗಳ ಇರುವಿಕೆ ಬಗ್ಗೆ ಅಷ್ಟು ತಿಳಿದಿರಲಿಲ್ಲ.

ಬೋರ್ನಿಯ ದ್ವೀಪವು ಮಲೇಷ್ಯಾದ ಭೂ ಪ್ರದೇಶದಿಂದ ಸುಮಾರು ಒಂದು ಸಾವಿರ ಕಿ.ಮೀ. ದೂರದಲ್ಲಿದ್ದು, ದಟ್ಟ ಕಾಡಿನ ಪ್ರದೇಶ ಇದಾಗಿದೆ. ಈ ದ್ವೀಪದ ದಟ್ಟ ಕಾಡಿನಲ್ಲಿರುವ ನವಿಲುಕೋಳಿಯನ್ನು ನೋಡಬೇಕೆಂದು ಬಹಳ ವರ್ಷಗಳಿಂದ ಬಯಸಿದ್ದೆ. ಅದೃಷ್ಟ ಕೂಡಿ ಬಂದಿದ್ದು ಈಚೆಗೆ. ಬೆಂಗಳೂರಿನಿಂದ ಮಲೇಷ್ಯಾದ ಕೌಲಾಲಂಪುರದವರೆಗೆ ವಿಮಾನ ಪ್ರಯಾಣ ಮತ್ತು ಅಲ್ಲಿಂದ ಬೋರ್ನಿಯ ದ್ವೀಪಕ್ಕೆ ಮತ್ತೆ 2 ಗಂಟೆ ವಿಮಾನದಲ್ಲಿ ಸಾಗಿ ಕೋಟ ಕಿನಬಾಲು **(Kota Kinabalu)** ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದೆ. ಅಲ್ಲಿಂದ ರಸ್ತೆಯಲ್ಲಿ ಮತ್ತೆ ನಾಲ್ಕು ಗಂಟೆ ಪ್ರಯಾಣ ಮಾಡಿ ಬೆಟ್ಟ ಪ್ರದೇಶದಲ್ಲಿರುವ ಕಿನಬಾಲು ರಾಷ್ಟ್ರೀಯ ಉದ್ಯಾನ **(Kinabalu National Park, UNESCO heritage site)** ತಲುಪಿದ್ದೆ.



ಹೆಣ್ಣು ನವಿಲುಕೋಳಿ